ಅಸಲು ದಾವಾ ನಂ.**5/2015**
ಡಿ ಡಬ್ಲ್ಯೂ **:1**

(ಇಂದು ದಿನಾಂಕಃ **09.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಕೆ ಎಸ್ ಪಿ ರವರಿಂದಃ

ವಾದಿ ನಮ್ಮ ಸರ್ವೆ ನಂಬರ್ ಗೆ ಸಂಬಂಧಿಸಿದಂತೆ ದಾವೆ ದಾಖಲಿಸಿರುತ್ತಾರೆ. ವಾದಿ 2-3 ಸರ್ವೆ ನಂಬರ್ ಗಳಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತಾರೆ. ದಾವಾ ಆಸ್ತಿಯ ಅಕ್ಕಪಕ್ಕ ನಮ್ಮ ಜಮೀನು ಇರುವುದಿಲ್ಲ. ವಾದಿ ತನಗೆ ಮಂಜೂರಾಗಿರುವ ಸರ್ವೆ ನಂಬರ್ 33, 2 ಎಕರೆಗೆ ಸಂಬಂಧಿಸಿದಂತೆ ತಂಟೆ ತಕರಾರು ಮಾಡಬಾರದೆಂದು ದಾವೆ ಸಲ್ಲಿಸಿರುತ್ತಾರೆ. ಅವರ ಆಸ್ತಿ ತಕರಾರು ಮಾಡುವುದಿಲ್ಲ ಎಂದು ನುಡಿಯುತ್ತಾರೆ. ವಾದಿ ದಾವಾ ಆಸ್ತಿ ಮಂಜೂರಾದ ಅಂದಿನಿಂದ ಖಾತೆ ಮಾಡಿಸಿಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಕ್ರಯಕ್ಕೆ ಖರೀದಿಸಿರುವ ಆಸ್ತಿಯೇ ಬೇರೆ ಮತ್ತು ದಾವಾ ಆಸ್ತಿಯೇ ಬೇರೆ ಎಂದರೆ ಸಾಕ್ಷಿ ವಾದಿಯ ಆಸ್ತಿಯೇ ಇಲ್ಲ ಎಂದು ನುಡಿಯುತ್ತಾರೆ. ಅ.ದಾ 116/2011 ರಲ್ಲಿ ವಾದಿಯ ವಿರುದ್ಧ ನಿರ್ಬಂಧಕಾಜ್ಞೆ ಆದೇಶ ಪಡೆದುಕೊಂಡು ವಾದಿಯ ಸ್ವಾಧೀನಕ್ಕೆ ತಂಟೆ ತಕರಾರು ಮಾಡಿದ ಕಾರಣ, ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಪ್ರಮಾಣ ಪತ್ರಿಕೆಯಲ್ಲಿ ಸೃಷ್ಟಿಸಿಕೊಂಡ ದಾಖಲೆಗಳ ಮೇಲೆ ದಾವೆ ತಂದಿರುತ್ತಾರೆಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಚೆಕ್ಕುಬಂದಿ ನೀಡಿ ದಾವೆ ತಂದಿರುತ್ತಾರೆಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಮಂಜೂರಾದ ಜಮೀನಿಗೆ ಸಂಬಂಧಿಸಿದಂತೆ ದಾವೆ ತಂದಿರುತ್ತಾರೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಕಾಶೆ ಪಡೆದು ದಾವೆ ಸಲ್ಲಿಸಿರುತ್ತಾರೆಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅ.ದಾ 116/11 ಮತ್ತು ದಾವಾ ಆಸ್ತಿ ಬೇರೆ ಬೇರೆ ಆಗಿರುವ ಕಾರಣ, ವಾದಿ ಕೇಳಿರುವ ಪರಿಹಾರ ಪಡೆಯಲು ಅರ್ಹರಿರುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು